ಶ್ರೀ ಎಸ್. ಆರ್. ಬೊಮ್ಮಾಯಿ (ಮಾನ್ಯ ಕಂದಾಯ ಮಂತ್ರಿಗಳು).—

(ಅ) ಕರ್ನಾಟಕದಲ್ಲಿ ತಾಲ್ಲೂಕು ಮಟ್ಟದ ೨೦ ಅಂಶಗಳ ಕಾರ್ಯ ಕ್ರಮದ ಸಭೆಗೆ ಅಧಿಕಾರೇತರ ಸದಸ್ಯರುಗಳನ್ನು ಇದುವರೆವಿಗೂ ೩೪೮ ಅಧಿಕಾರೇತರ ಸದಸ್ಯರುಗಳನ್ನು ೧೧೬ ತಾಲ್ಲೂಕುಗಳಲ್ಲಿ ನೇಮಕಾತಿ ಮಾಡಲಾಗಿದೆ.

ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗದವರಿಗಾಗಿ ಮೀಸಲಾಗಿಟ್ಟಿರುವ ಸಬ್-ಇನ್ಸ್‌ಪೆಕ್ಟರ್ ಹುದ್ದೆಗಳು

೧೨೫೫. ಶ್ರೀಮತಿ ಶಿವಕಾಂತ ಚತುರೆ (ಹುಲ್‌ಸೂರ್).—ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಅಬಕಾರಿ ಇಲಾಖೆಯಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗದವರಿಗೆ ಮೀಸಲಾಗಿಟ್ಟಿರುವ ಶೇಕಡ ೧೮ ರಷ್ಟು ಸಬ್ ಇನ್ಸ್‌ಪೆಕ್ಟರ್ ಹುದ್ದೆಯನ್ನು ಪೂರ್ಣವಾಗಿ ತುಂಬಲಾಗಿದೆಯೇ ?

(ಆ) ಹಾಗಿಲ್ಲದಿದ್ದಲ್ಲಿ ಈ ಹುದ್ದೆಗಳನ್ನು ಯಾವಾಗ ತುಂಬಲಾಗುವುದು ?

ಶ್ರೀ ರಮೇಶ್ ಸಿ. ಜಿಗಜಿಣಗಿ (ಅಬಕಾರಿ ರಾಜ್ಯ ಸಚಿವರು).—

(ಅ) ತುಂಬಲಾಗಿದೆ

(ಆ) ಮೇಲಿನ (ಅ) ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ

ಧಾರವಾಡ ಜಿಲ್ಲೆಯಲ್ಲಿ ಅಭಾವ ಕಾಮಗಾರಿಗಳಿಗಾಗಿ ಪೆಚ್ಚ ಮಾಡಿರುವ ಮೊಬಲಗು

೫೭೦. ಶ್ರೀ ಕೆ. ಬಿ. ಕೋಳಿವಾಡ್ (ರಾಣೆಬೆನ್ನೂರು).—ಮಾನ್ಯ ಕಂದಾಯ ಹಾಗೂ ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಧಾರವಾಡ ಜಿಲ್ಲೆಯಲ್ಲಿ ಪರಿಹಾರ ಕಾಮಗಾರಿಗಳಿಗೆ ಖರ್ಚು ಮಾಡಿದ ಒಟ್ಟು ಹಣವೆಷ್ಟು ?

(ಆ) ಧಾರವಾಡ ಜಿಲ್ಲೆಯಲ್ಲಿ ಪ್ರತಿ ತಾಲ್ಲೂಕಿನಲ್ಲಿ ಖರ್ಚು ಮಾಡಿದ ಹಣ ಮತ್ತು ಪ್ರತಿ ತಾಲ್ಲೂಕಿನಲ್ಲಿ ಅಭಾವಕ್ಕೊಳಗಾದ ಹಳ್ಳಿಗಳೆಷ್ಟು ?

(ಇ) ಕೇಂದ್ರ ಸರ್ಕಾರದಿಂದ ಅಭಾವ ಪರಿಹಾರ ಕಾಮಗಾರಿಗಳಿಗಾಗಿ ರಾಜ್ಯ ಸರ್ಕಾರಕ್ಕೆ ಮಂಜೂರಾಗಿರುವ ಹಣವೆಷ್ಟು ?

(ಈ) ಪರಿಹಾರ ಕಾಮಗಾರಿಗಳಿಗಾಗಿ ರಾಜ್ಯ ಸರ್ಕಾರವು ವಾಸ್ತವಿಕವಾಗಿ ಖರ್ಚು ಮಾಡಿದ ಹಣವೆಷ್ಟು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮಂತ್ರಿಗಳು).—

(ಅ) ಪರಿಹಾರ ಕಾಮಗಾರಿಗಳಿಗಾಗಿ ಧಾರವಾಡ ಜಿಲ್ಲೆಯಲ್ಲಿ ಪ್ರಸಕ್ತ ಸಾಲಿನಲ್ಲಿ ಒಟ್ಟು ೧೦೦೩.೮೪ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ.

(ಆ) ಧಾರವಾಡ ಜಿಲ್ಲೆಯ ಪ್ರತಿ ತಾಲ್ಲೂಕಿನಲ್ಲಿ ಬರಗಾಲ ಕಾಮಗಾರಿಗಳ ಸಲುವಾಗಿ ಖರ್ಚು ಮಾಡಿದ ಮೊತ್ತದ ಪಟ್ಟಿ ಮತ್ತು ಅಭಾವಕ್ಕೊಳಗಾದ ಗ್ರಾಮಗಳ ತಃಖ್ತೆಗಳನ್ನು ಲಗತ್ತಿಸಿದೆ.

(ಇ) ೧೯೮೫-೮೬ನೇ ಸಾಲಿಗೆ ಕೇಂದ್ರ ಸರ್ಕಾರವು ಖರ್ಚಿನ ಮಿತಿ ನಿರ್ಣಯಿಸಿ ೫೬.೫೧ ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿದೆ. ಅದರಲ್ಲಿ ಇಲ್ಲಿಯವರೆಗೆ ೪೨.೦೦ ಕೋಟಿ ರೂಪಾಯಿಗಳನ್ನು ಕೇಂದ್ರವು ಬಿಡುಗಡೆ ಮಾಡಿದೆ. ಆದರೆ ರಾಜ್ಯ ಸರ್ಕಾರವು ಇಲ್ಲಿಯವರೆಗೆ ೭೯.೫೪ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದೆ.

(ಈ) ರಾಜ್ಯ ಸರ್ಕಾರವು ೧೫-೧-೧೯೮೬ರ ವರೆಗೆ ಪರಿಹಾರ ಕಾಮಗಾರಿಗಳಿಗಾಗಿ ೫೨.೦೭ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದೆ.